ಓ.ಎಸ್.ನಂಃ 188/2023

ಡಿಡಬ್ಲ್ಯೂ-2

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 07.04.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ನನ್ನ ತಂದೆ ಆರೋಗ್ಯವಾಗಿ ಇದ್ದಾರೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಮುನ್ನಾ ನನ್ನ ತಂದೆ ದಾಖಲೆಗಳನ್ನು ಪರಿಶೀಲಿಸಿದ್ದರು. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಸ್ವತ್ತಿನ ಖರೀದಿ ಬಗ್ಗೆ ನಮ್ಮ ಮನೆಯಲ್ಲಿ ಮಾತುಕತೆಯಾಯಿತು. ಒಂದನೇ ಪ್ರತಿವಾದಿ ಕೋಟೆಕೆರೆ ಗ್ರಾಮದವರು. ನಮ್ಮದು ಸಹ ಕೋಟೆಕೆರೆ ಗ್ರಾಮ. ಒಂದನೇ ಪ್ರತಿವಾದಿ ಈಗ ಹೀರಿಕಾಟಿ ಗ್ರಾಮದಲ್ಲಿ ವಾಸವಿದ್ದಾರೆ. ಒಂದನೇ ಪ್ರತಿವಾದಿಯ ಎಲ್ಲಾ ದಾಖಲೆಗಳು ಹೀರಿಕಾಟಿ ಗ್ರಾಮದ ಹೆಸರಿಗೆ ಇವೆ ಎಂದರೆ ಸರಿ. ಖರೀದಿಗೂ ಮುನ್ನಾ ಒಂದನೇ ಪ್ರತಿವಾದಿ ಹೆಸರಿಗೆ ಇದ್ದ ಕ್ರಯ ಪತ್ರವನ್ನು ನೋಡಿರುತ್ತೇನೆ. ನನಗೆ ಅಷ್ಟು ಮಾಹಿತಿ ಇಲ್ಲ ನನ್ನ ತಂದೆ ನೋಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖರೀದಿ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ.

ಖರೀದಿಗೂ ಮುನ್ನಾ ನನ್ನ ತಂದೆ ಕರಾರು ಪತ್ರ ಮಾಡಿಕೊಂಡಿಲ್ಲ. ಒಂದನೇ ಪ್ರತಿವಾದಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತನ್ನು ಇಂದಿಗೂ ಸಹ ವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವ ಮುನ್ನಾ ಅದರ ಅಕ್ಕಪಕ್ಕದಲ್ಲಿರುವವರನ್ನು ವಿಚಾರಿಸಿದೇವು. ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು, ಅವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿ ನಮ್ಮ ಸಂಬಂಧಿಕರು ಎಂದರೆ ಸರಿ. ನನ್ನ ತಂದೆಯ ಅಕ್ಕ ಒಂದನೇ ಪ್ರತಿವಾದಿಯ ಅಣ್ಣನಿಗೆ ವಿವಾಹವಾಗಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ಒಂದನೇ ಪ್ರತಿವಾದಿ ಬಾವ ಎಂದರೆ ಸರಿ. ಒಂದನೇ ಪ್ರತಿವಾದಿ ಅನಕ್ಷರಸ್ಥರು ಎಂದರೆ ಸರಿ. ಒಂದನೇ ಪ್ರತಿವಾದಿಗೆ 70 ವರ್ಷವಾಗಿದೆ ಎಂದರೆ ಸರಿ.

ದಾವಾ ಸ್ವತ್ತನ್ನು ಖರೀದಿ ಮಾಡುವ ಕಾಲಕ್ಕೆ ನಾನು ಓದಿರಲಿಲ್ಲ. ದಾವಾ ಸ್ವತ್ತನ್ನು ಖರೀದಿ ಕಾಲಕ್ಕೆ ನಾನು ಮತ್ತು ನನ್ನ ತಂದೆ ಒಂದೇ ಕುಟುಂಬದಲ್ಲಿ ವಾಸವಿದ್ದೇವು. ದಾವಾ ಸ್ವತ್ತನ್ನು ಖರೀದಿ ಮಾಡುತ್ತಿದ್ದೇನೆ ಮತ್ತು ಅದನ್ನು ನೊಂದಣಿ ಮಾಡಿಸಿಕೊಳ್ಳುತ್ತಿದ್ದೇನೆ ಎಂದು ನನ್ನ ತಂದೆ ನನಗೆ ತಿಳಿಸಿದ್ದರು. ಆ ಕಾಲಕ್ಕೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ನೋಂದಣಿ ಕಾಲಕ್ಕೆ ನಾನು ಹೋಗಲಿಲ್ಲ. ಖರೀದಿ ಪತ್ರಕ್ಕೆ ಒಂದನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳ ಸಹಿಯನ್ನು ಪಡೆದಿದ್ದಾರೆ. ಖರೀದಿ ಕಾಲಕ್ಕೆ ನನ್ನ ತಂದೆ ಜೊತೆ ಸಾಕ್ಷಿದಾರರಾಗಿ ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಖರೀದಿ ಮಾಡುವ ಮುನ್ನಾ ನನ್ನ ತಂದೆ ನೋಡಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾ ಸ್ವತ್ತಿನಲ್ಲಿ ನಾವು ಕೊಳವೆ ಬಾವಿ ಹಾಕಿಸಿಲ್ಲ. ದಾವಾ ಸ್ವತ್ತಿಗೆ ನಾವು ತಂತಿ ಬೇಲಿ ಹಾಕಿಸಿಲ್ಲ. ನಾವು ದಾವಾ ಸ್ವತ್ತನ್ನು ಅಭಿವೃದ್ಧಿಪಡಿಸಿಲ್ಲ. ಇಂದಿಗೂ ಸಹ ಮಳೆಯ ಆಶ್ರಯದಿಂದ ವಾದಿ ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ11 ರಲ್ಲಿರುವ ಆಧಾರ್ ಸಂಖ್ಯೆಯಲ್ಲಿ ಹೀರಿಕಾಟಿ ಗ್ರಾಮದ ಮರಿಸಿದ್ದಯ್ಯನ ಮಗ ಪುಟ್ಟಯ್ಯ ಎಂದು ನಮೂದು ಇದೆ ಎಂದರೆ ಸರಿ. ಒಂದನೇ ಪ್ರತಿವಾದಿ ನಿಪಿ11 ರ ಕಾಲಕ್ಕೆ ಕೋಟೆಕೆರೆ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆ ಕಾಲಕ್ಕೆ ಒಂದನೇ ಪ್ರತಿವಾದಿ ಕೋಟೆಕೆರೆ ಗ್ರಾಮದಲ್ಲಿ ವಾಸವಿದ್ದಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಬಲ್ಲೆ. ನಿಪಿ17 ಒಂದನೇ ಪ್ರತಿವಾದಿಯ ಆಧಾರ್ ಕಾರ್ಡ್ ಎಂದರೆ ಸರಿ. ನಿಪಿ17 ರಲ್ಲಿ ಕಾಣುವ ಆಧಾರ್ ಸಂಖ್ಯೆ ಮತ್ತು ನಿಪಿ11 ರಲ್ಲಿ ಕಾಣುವ ಆಧಾರ್ ಸಂಖ್ಯೆ ಎರಡು ಒಂದನೇ ಎಂದರೆ ಸರಿ. ಒಂದನೇ ಪ್ರತಿವಾದಿ ಎಲ್ಲಾ ದಾಖಲೆಗಳು ಹೀರಿಕಾಟಿ ಗ್ರಾಮದಲ್ಲಿ ಇದ್ದು ಕೋಟೆಕೆರೆ ಗ್ರಾಮದಲ್ಲಿ ಯಾವುದೆ ದಾಖಲೆಗಳು ಇಲ್ಲ ಎಂದರೆ ಸರಿ.

ನನ್ನ ತಂದೆ ಖರೀದಿದಾರರಾಗಿರುವ ಕಾರಣ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಕೊಡಲು ತೊಂದರೆ ಇಲ್ಲಾ ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಹೋರಬರುತ್ತದೆ ಎಂದು ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣ ಭಾಗಕ್ಕೆ-ನರಸೇಗೌಡರ ಜಮೀನು ಇದೆ, ಪಶ್ಚಿಮಕ್ಕೆ-ರಾಜಪ್ಪರವರ ಜಮೀನು, ಪೂರ್ವಕ್ಕೆ-ಮಾದಯ್ಯರವರ ಜಮೀನು ಮತ್ತು ಉತ್ತರಕ್ಕೆ-ನಾಗಪ್ಪರವರ ಜಮೀನು ಇದೆ.

ದಾವಾ ಸ್ವತ್ತಿನ ಚೆಕ್ಕುಬಂದಿಯಲ್ಲಿ ಇರುವವರು ನಮ್ಮ ಜೊತೆ ಚೆನ್ನಾಗಿ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿಯಲ್ಲಿ ಇರುವವರನ್ನು ಸಾಕ್ಷಿ ಮಾಡಿಸಿ, ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವೇ ಇದ್ದೇವೆ ಎಂದು ಸಾಭೀತುಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ದಾವಾ ಸ್ವತ್ತಿನ ಅಕ್ಕಪಕ್ಕ ನಮ್ಮ ಬೇರೆ ಸ್ವತ್ತುಗಳು ಇಲ್ಲ. ದಾವಾ ಸ್ವತ್ತಿಗೆ ಹೋಗಲು ದಾರಿ ಇಲ್ಲ ಎಂದರೆ ಸರಿಯಲ್ಲ. ವಾದಿ ಹೆಸರು ಮತ್ತು ಒಂದನೇ ಪ್ರತಿವಾದಿಯ ಹೆಸರು ಒಂದೇ ಎಂದರೆ ಸರಿ. ವಾದಿಯ ತಂದೆಯ ಹೆಸರನ್ನು ಒಂದನೇ ಪ್ರತಿವಾದಿಯ ತಂದೆಯ ಹೆಸರನ್ನಾಗಿ ತಿದ್ದುಪಡಿ ಮಾಡಿ, ಸುಳ್ಳು ಕ್ರಯ ಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಒಂದನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ನಾನು ತಿಳಿದುಕೊಂಡಿಲ್ಲ. ಸದರಿ ತಕರಾರನ್ನು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ. ಒಂದನೇ ಪ್ರತಿವಾದಿ ತನ್ನನ್ನು ಆಧಾರ್ ಕಾರ್ಡ್‌ನ್ನು ಬ್ಯಾಂಕಿಗೆ ಲಿಂಕ್ ಮಾಡಲು ಸಹಿ ಬೇಕು ಎಂದು ಸುಳ್ಳು ಹೇಳಿ ನನ್ನ ತಂದೆ ಕ್ರಯ ಪತ್ರ ಬರೆಸಿಕೊಂಡಿದ್ದಾರೆ ಎಂದದು ತಕರಾರು ಹಾಕಿದ್ದಾರೆ ಎಂದರೆ  ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಗೆ ನನ್ನ ತಂದೆ ಬರೆಸಿಕೊಂಡಿರುವ ಕ್ರಯ ಪತ್ರದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.  ರೂ.3,40,000/- ಗಳಿಗೆ ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು. ಅದರ ವಿಸ್ತೀರ್ಣ 3 ಎಕರೆ 12 ಗುಂಟೆ. ದಾವಾ ಸ್ವತ್ತಿನ ಪ್ರತಿ ಎಕರೆಗೆ 30 ಲಕ್ಷ ಬೆಲೆಬಾಳಬಹುದು. ದಾವಾ ಸ್ವತ್ತು ರೂ.1 ಕೋಟಿಗೂ ಅಧಿಕವಾಗಿ ಬೆಲೆಬಾಳುವುದಿಲ್ಲ. ಮಾರಾಟಗಾರರಿಗೆ ಯಾವ ರೂಪದಲ್ಲಿ ಹಣವನ್ನು ನನ್ನ ತಂದೆ ವರ್ಗಾಹಿಸಿದ್ದರು ಎಂದು  ನನಗೆ ಗೊತ್ತಿಲ್ಲ.

ನನ್ನ ತಂದೆ ಖರೀದಿ ಮಾಡಿರುವ ಕ್ರಯ ಪತ್ರದ ಒಕ್ಕಣಿಕೆಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ರೂ.20,000/- ಕ್ಕೂ ಅಧಿಕವಾಗಿ ಹಣದ ವರ್ಗಾವಣೆ ಮಾಡಬೇಕಾದರೆ ಬ್ಯಾಂಕ್ ಮೂಲಕ ಮಾಡಬೇಕು ಎಂದು ನನಗೆ ಗೊತ್ತಿದೆ. ಕ್ರಯ ಪತ್ರದಲ್ಲಿ ನಗದನ್ನು ಬ್ಯಾಂಕ್ ಮೂಲಕ ವರ್ಗಾಹಿಸಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಗದು ರೂಪದಲ್ಲಿ ಹಣ ಸಂದಾಯವಾಗಿದೆ ಎಂದು ಕ್ರಯ ಪತ್ರದಲ್ಲಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಫ್ಯಾಕ್ಟರಿಯಲ್ಲಿ ಖಾಸಗಿ ಕೆಲಸ ಮಾಡುತ್ತಾರೆ. ನನ್ನ ತಂದೆ ಬಳಿ ಕ್ರಯ ಪತ್ರದ ಕಾಲಕ್ಕೆ ಹಣ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವ ಬಗ್ಗೆ  ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ನನ್ನ ತಾತನ ಸ್ವತ್ತು ಇದೆ. ನನ್ನ ತಾತನ ಹೆಸರು ಮರಿಗೋಪಯ್ಯ.

***(ಪ್ರಶ್ನೆ: ನನ್ನ ತಾತನಿಗೆ ಎಷ್ಟು ಜನ ಮಕ್ಕಳು.***

***ವಾದಿ ಈ ದಾವೆಯಲ್ಲಿ ದಿ: 27.11.2017 ರ ಕ್ರಯ ಪತ್ರವನ್ನು ಶೂನ್ಯಗೊಳಿಸುವಂತೆ ದಾವೆ ಹೂಡಿದ್ದು, ಸದರಿ ದಾವೆಯ ವಾಸ್ತವಾಂಶದಲ್ಲಿ ಮೇಲ್ಕಂಡ ಪ್ರಶ್ನೆ ಸಮಂಜಸವಾಗಿದ್ದಲ್ಲ. ಆ ಕಾರಣ ಪ್ರಶ್ನೆಯನ್ನು ತಿರಸ್ಕರಿಸಲಾಗಿದೆ.)***

ನನ್ನ ತಂದೆಯ ಬಳಿ ಖರೀದಿ ಕಾಲಕ್ಕೆ ಕ್ರಯ ಪತ್ರದಲ್ಲಿ ನಮೂದು ಇರುವ ಮೊತ್ತ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಬಹುದು. ನಮ್ಮ ಗ್ರಾಮದವರು ನನ್ನ ತಂದೆ ಖರೀದಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರಕ್ಕೆ ಸಾಕ್ಷಿಯಾಗಿರುವ ಸಾಕ್ಷಿದಾರರು ನನಗೆ ಗೊತ್ತು. ಕ್ರಯ ಪತ್ರಕ್ಕೆ ಸಾಕ್ಷಿಯಾಗಿರುವ ಸಾಕ್ಷಿದಾರರು ನನ್ನ ಸಂಬಂಧಿಕರಲ್ಲ. ದಾವಾ ಸ್ವತ್ತು ವಾದಿಯ ತಂದೆ ಸಣ್ಣಯ್ಯರವರಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಣ್ಣಯ್ಯ ಮರಣ ಹೊಂದಿದ ನಂತರ ವಾದಿಗೆ ದಾವಾ ಸ್ವತ್ತು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಹೆಸರಿಗೆ 1987-88 ರಲ್ಲಿ ಪೌತಿ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ಹೆಸರು ಒಂದೆಯಾಗಿರುವ ಕಾರಣ ವಾದಿ ಹೆಸರನ್ನು ನಕಲು ಮಾಡಿ ನನ್ನ ತಂದೆ ಕ್ರಯ ಪತ್ರ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ನನಗೆ ವಾಸ್ತವಾಂಶ ಗೊತ್ತಿಲ್ಲದಿದ್ದರು ನನ್ನ ತಂದೆ ಕ್ರಯ ಪತ್ರಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ